(ಇಂದು ದಿನಾಂಕ 13-04-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಬಿ.ಎಸ್.ಯು. ವಕೀಲರಿಂದ–**

ನಾನು ಹಾಜರುಪಡಿಸಿರುವ ನಿ.ಪಿ.17 ರಿಂದ 19 ರ ದಾಖಲಾತಿಗಳು ಮನೆಯಲ್ಲಿಯೇ ಇದ್ದು, ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ನನಗೆ ಸಿಕ್ಕಿರಲಿಲ್ಲ. ನಿ.ಪಿ.1 ರಿಂದ 19 ನನ್ನ ಮಗನಿಗೆ ಸಂಬಂಧಪಟ್ಟ ದಾಖಲಾತಿಗಳು ಆಗಿರುತ್ತವೆ ಎಂದರೆ ಸರಿ. ನಿ.ಪಿ.17 ರಿಂದ 19 ರವರೆಗೆ ಆದಂತಹ ಆದೇಶದ ಆಧಾರದ ಮೇರೆಗೆ ನಂತರ ಆದಂತಹ ಪ್ರಕ್ರಿಯೆಗಳ ಬಗ್ಗೆ ನನಗೆ ನೆನಪಿಲ್ಲ. ಪ್ರಸ್ತುತ ದಾವೆಯ ಪ್ರತಿವಾದಿ ಹಾಗೂ ನನ್ನ ಮಗನ ನಡುವೆ ಅಸಲು ದಾವಾ ಸಂಖ್ಯೆ 24/20 ರಲ್ಲಿ ದಾವೆಯು ಚಾಲ್ತಿಯಲ್ಲಿದೆ ಎಂದರೆ ಸರಿ. ನನ್ನ ಮಗ ಪ್ರತಿವಾದಿಯ ವಿರುದ್ಧ ದಾವೆಯನ್ನು ಸಲ್ಲಿಸಿರುವ ವಿಚಾರ ಈಗ್ಗೆ ಸುಮಾರು 5 - 6 ವರ್ಷಗಳ ಪೂರ್ವದಲ್ಲಿ ತಿಳಿದು ಬಂದಿರುತ್ತದೆ. ನಿ.ಪಿ.17 ರಿಂದ 19 ರಲ್ಲಿನ ಆದೇಶದ ರೀತ್ಯಾ ಸದರಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನನ್ನ ಮಗನ ಹೆಸರಿಗೆ ದಾಖಲಾತಿಗಳು ಆಗಿರುವುದಿಲ್ಲ. ನಿ.ಪಿ.17 ರಿಂದ 19 ರ ದಾಖಲಾತಿಗಳು ಪ್ರಸ್ತುತ ದಾವೆಗೆ ಸಂಬಂಧಪಟ್ಟದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.17 ರಿಂದ 19 ರಲ್ಲಿ ಉಲ್ಲೇಖಿಸಲಾದ ಸ್ವತ್ತಿಗೂ ದಾವಾ ಸ್ವತ್ತಿಗೂ ಯಾವುದೇ ರೀತಿಯಾದ ಸಂಬಂಧನಾತೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ